

ಗಿಡಗಳೊಣಗಿ ಎಲೆಯುದುರಿಸಿದಾಗ ತರಗೆಲೆ ಸಂಗ್ರಹ. ಅಂದರೆ ಬಿದ್ದ ತರಗೆಲೆಗೂ ನಮ್ಮ ವೃತ್ತಿಗಳು ಸ್ಪಂದಿಸುತ್ತಿದ್ದುವಲ್ಲ! ಮೋಡ ಕವಿದು ಮಳೆ ಬಾರದಿದ್ದರೆ ಚಿಂತೆ. ಏಪ್ರಿಲ್–ಮೇಯಲ್ಲಿ ಬೀಜ ಬಿತ್ತಿ ಮೊಳೆಸಲು ಸುಸಮಯ. ಮಳೆ ಬಂದು ನೀರಾವರಿ ನಿಲ್ಲಿಸಿದಾಗ, 'ಅಬ್ಬ ಈ ಬಾರಿ ಬಚಾವ್' ಎನ್ನುವ ಸಮಾಧಾನ ಹೀಗೆ ಪುಟಗಟ್ಟಲೆ ನಮ್ಮ ಹಿಂದಿನವರ ಪ್ರಕೃತಿಸ್ಪಂದನೆಯನ್ನು ಬರೆಯುತ್ತ ಸಾಗಬಹುದು.

ಈಗಿನ ವೃತ್ತಿಗಳು, ಜಾಬುಗಳು ಪ್ರಕೃತಿಯೊಂದಿಗೆ ಹೀಗೆ ಸಂಭಾಷಿಸುತ್ತವೆಯೆ? ಅಕೌಂಟಿಂಗ್, ಸಾಫ್ಟ್‌ವೇರ್, ಪತ್ರಿಕೋದ್ಯಮ, ಇಂಟೀರಿಯರ್ ಡಿಸೈನ್, ಮಾಡೆಲಿಂಗ್ ಇದನ್ನೆಲ್ಲ ಮಾಡುವವರಿಗೆ ಮೊದಲ ಮಳೆ, ಸಿಡಿಲಿನೊಂದಿಗೆ ಭೂಮಿಗೆ ಸೇರುವ ನೈಟ್ರೊಜನ್ ಉಪಯೋಗವಿದೆಯೆ? ಮಳೆ ಹತ್ತು ದಿನ ತಡವಾದರೆ ವಯಸ್ಸಾಗುವ ಸಸಿಮಡಿ ಇವರಲ್ಲಿದೆಯೆ? ತೋಡು ಒಣಗಿದರೆ ತಿಂಗಳ ಕೊನೆಯ ಸಂಬಳಕ್ಕೆ ಕತ್ತರಿ ಬೀಳುವುದೇ? ಇಲ್ಲವಲ್ಲ. ನಿಸರ್ಗದ ಸಹಜ ಪ್ರಕ್ರಿಯೆಗಳಿಂದ ನಾವು ಡಿಸ್‌ಕನೆಕ್ಟ್ ಆಗಿಬಿಟ್ಟರೆ (ಹಾಗಂದುಕೊಂಡರೆ) ಪ್ರಕೃತಿಯೆನ್ನುವುದು ನಮಗೊಂದು ಐಚ್ಛಿಕ ಮೌಲ್ಯವಾಗಿ ಬಿಡುತ್ತದೆ. ನಿಸರ್ಗವು ಒಂದು ಪರೋಕ್ಷ ಮೌಲ್ಯವಾದಾಗ ಅದರ ನೈಜ ಸಮಸ್ಯೆಗಳೂ ನಮ್ಮರಿವಿಗೆ ಬರದೆ, 'ಎಲ್ಲೋ ಯಾರೋ ಎಮ್ಮೆಯೊಂದಕ್ಕೆ ಹೊಡೆದರು' ಎಂದು ಸ್ವತಃ ಪೆಟ್ಟು ತಿನ್ನುತ್ತಿರುವ ದಪ್ಪಚರ್ಮದ ಎಮ್ಮೆ ಅಂದುಕೊಂಡಂತೆ ನಾವೂ ಅಂದುಕೊಳ್ಳುತ್ತೇವೆ. ನೈಜ ಸಮಸ್ಯೆಗಳೇ ಅಲ್ಲದ – ಹಳ್ಳಿಗಿನ್ನೂ ಎಟಿಎಂ ಬಂದಿಲ್ಲ, ಮಕ್ಕಳು ಶಾಲೆಗೆ ನಡೆದೇ ಹೋಗುತ್ತಾರೆ, ರಫ್ತು ಕಡಿಮೆಯಾಗಿದೆ... ಈ ರೀತಿಯ ಮೇಲ್‌ಸ್ತರದ ಸಮಸ್ಯೆಗೆ ನಿರಂತರ ತಲೆಬಿಸಿಮಾಡುತ್ತ ಜನ ದಿನದೂಡುತ್ತಾರೆ. ಪೊಳ್ಳು ಅಭಿವೃದ್ಧಿ, ಸುಳ್ಳು ಆರ್ಥಿಕತೆಯಂತಹ ಬೆಗಡೆಯ ಗರಿಗಳನ್ನು ಹೊದ್ದು ತಾನು ನವಿಲೆಂದು ಭ್ರಮಿಸುವ ಕೆಂಬೂತದ ಪರಿಸ್ಥಿತಿ ನಮಗೆ ಬರುತ್ತದೆ. ಈಗ ಅದೇ ಆಗಿದೆ.

2020ರಲ್ಲಾದರೂ ನಮಗೆ ಪ್ರಕೃತಿಯು ಪ್ರತ್ಯಕ್ಷ ಮೌಲ್ಯವಾಗಲಿ. ನಮ್ಮದೇ ಬಾವಿಯ ನೀರನ್ನು ನಾವು ಸೇದಿ ಕುಡಿಯುವಂತಾಗಲಿ. ನಮ್ಮ ಶೌಚವು ನಮ್ಮದೇ ಹಿತ್ತಿಲಿನಲ್ಲಿ ಮಣ್ಣುಸೇರಲಿ! ತ್ಯಾಜ್ಯವನ್ನು ಇನ್ನೊಬ್ಬನ ಭೂಮಿಗೆ ಕಳಿಸುವ ಶೋಷಣೆ ನಿಲ್ಲಲಿ. ಮಳೆಗಾಲವೂ ಬರಗಾಲವೂ ನಮ್ಮನ್ನು ನೇರವಾಗಿ ತಟ್ಟಲಿ! ನಮ್ಮದೇ ತೆಂಗಿನ ಮರದ ಪೊರಕೆ ನಮ್ಮ ಕಸಗುಡಿಸಲಿ. ಆ ಕಸವು ನಮ್ಮ ಹೂವಿನ ಗಿಡಕ್ಕೆ ಗೊಬ್ಬರವಾಗಲಿ. ಬೇರೊಬ್ಬರು ಕಟ್ಟಿದ ಮನೆಯನ್ನು ವಸ್ತುವಿನಂತೆ ಖರೀದಿಸದೆ ನಾವೇ ನಮ್ಮ ಮನೆಯನ್ನು ಕಟ್ಟುವಂತಾಗಲಿ, ನಮ್ಮ ಬೆವರು ಅದರ ಅಡಿಪಾಯಕ್ಕೆ ಬೀಳಲಿ. ನಮ್ಮ ಮನೆಯ ಶುಭಸಮಾರಂಭಗಳು ನಮ್ಮ ಅಂಗಳದಲ್ಲೇ ನಡೆಯಲಿ. ಅದಕ್ಕೆ ನಾವೇ ಕೈಯಾರೆ ಚಪ್ಪರ ಕಟ್ಟುವಂತಾಗಲಿ. ಹೊರಗುತ್ತಿಗೆ ಬಿದ್ದುಹೋಗಲಿ. ನೆರೆಹೊರೆಯ ಸ್ನೇಹ–ಸಹಕಾರ ವೃದ್ಧಿಯಾಗಲಿ. ನಾವು ದುಡಿಯದ ದಿನಕ್ಕೆ ಸಂಬಳ ದೊರೆಯದಂತಾಗಲಿ. ದುಡಿಮೆಯ ಮೌಲ್ಯ ಹೆಚ್ಚಲಿ, ಸಂಬಳ ಕಡಿಮೆಯಾಗಲಿ! ಕೊಳ್ಳುವ ಬಯಕೆ ಆರಲಿ.

ಕೊನೆಯದಾಗಿ ಜನವರಿ 1ರ ಮೈಲಿಗಲ್ಲಿಗಿಂತ, ಹಗಲು–ರಾತ್ರಿ, ಪಕ್ಷ–ಮಾಸ, ಮಳೆ ಚಳಿ ಬಿಸಿಲುಗಳು ನಮ್ಮ ನಿಜವಾದ ಕಾಲಮಾಪನಗಳಾಗಲಿ. ನನ್ನ ಬರಹವು ನನ್ನ ಆದರ್ಶವಾಗಲಿ, ನನ್ನ ಅನುಸರಣೆಯೂ ಆಗಲಿ.

# ಮನುಷ್ಯ ಮನುಷ್ಯನನ್ನು ಪ್ರೀತಿಸುವಂತೆ ಆಗಲಿ

ಹೊಸ ವರ್ಷಕ್ಕೆ ಕೆಲವು ದಿನಗಳ ಎಣಿಕೆಯಷ್ಟೇ ಉಳಿದಿದೆ. ಹೊಸ ವರ್ಷ ಅನ್ನುವಾಗ ಯಾವತ್ತೂ ನನಗೆ ಒಂದು ಹಾಡು ನೆನಪಾಗುತ್ತೆ...

'ಹೊಸ ವರುಷಕೆ ಹೊಸ ಹರುಷವ
ಹೊಸತು ಹೊಸತು ತರುತಿದೆ'

ಇದು ಹಾಡಿನ ಮೊದಲ ಪ್ಯಾರಾದ ಎರಡನೇ ಸಾಲು.

ಪ್ರಾರಂಭದ ಮೊದಲ ಸಾಲು ಹೀಗಿದೆ:

'ಯುಗ ಯುಗಾದಿ ಕಳೆದರೂ
ಯುಗಾದಿ ಮರಳಿ ಬರುತಿದೆ'

ಈ ಹಾಡು ದ.ರಾ. ಬೇಂದ್ರೆ ಅವರನ್ನು ಬಲ್ಲವರಿಗೆಲ್ಲರಿಗೂ ಗೊತ್ತಿದೆಯಲ್ಲವೇ. ಆಮೇಲೆ ಇದು 'ಕುಲವಧು' ಸಿನಿಮಾದಲ್ಲಿ 1963ರಲ್ಲಿ ಎಸ್. ಜಾನಕಿಯವರು ಹಾಡಿ ಬೇಂದ್ರೆಯನ್ನು ಗೊತ್ತಿಲ್ಲದವರಿಗೂ ಹಾಡು ಗೊತ್ತಾಗುವಂತಾಯಿತು! ತಕ್ಕಮಟ್ಟಿಗೆ ಗುನುಗಲು ಸಾಧ್ಯವಿರುವವರೆಲ್ಲರ ನಾಲಿಗೆಯಲ್ಲಿ ಈ ಕವಿತೆ ಹಾಡಾಯಿತು. ನಾನು ಚಿಕ್ಕವಳಿದ್ದಾಗಿನಿಂದ ಈ ಹಾಡನ್ನು ಲೆಕ್ಕವಿಲ್ಲದಷ್ಟು ಸಲ ಕೇಳಿದ ನೆನಪಿದೆ. ಯುಗಾದಿಯ ದಿನವಂತೂ ಈ ಹಾಡು ನಮ್ಮ ಕಿವಿಗಳಿಗೆ ಕೇಳಿಸಿದರೇ ಆ ದಿವಸ ಪಾವನವಾಗುತ್ತದಂತೆ. ಇಲ್ಲವಾದರೆ ಏನೋ ಒಂದು ಕಳೆದುಕೊಂಡ ಭಾವ. ಹೌದು... ಇದು ಯುಗಾದಿಯ ಹಾಡು. ಯುಗಾದಿಯೆಂದರೆ ನಮ್ಮಲ್ಲಿ ಹಲವರಿಗೆ ಹೊಸ ವರ್ಷವೆಂದೇ ಲೆಕ್ಕ. ಯುಗಾದಿಯಾದರೂ, ಆಂಗ್ಲ ಪದ್ಧತಿಯ ಹೊಸ ವರ್ಷದ ಆಚರಣೆಯಾದರೂ ಫಲ ಒಂದೇ. ಒಟ್ಟಿನಲ್ಲಿ ಅದರ ಕುರಿತಾಗಿ ನಮ್ಮ ನಿಲುವೇನು, ನಮ್ಮ ಆಲೋಚನೆಯೇನು ಎನ್ನುವುದೇ ಮುಖ್ಯವಲ್ಲವೇ?

'ಹೊಂಗೆ ಹೂವ ತೊಂಗಲಲಿ
ಭೃಂಗದ ಸಂಗೀತ ಕೇಳಿ
ಮತ್ತೆ ಕೇಳ ಬರುತಿದೆ'

ಎನ್ನುತ್ತಾ... ಹೀಗೆ ಎಲ್ಲವೂ ಚೆನ್ನಾಗಿದೆ, ಸುಖ ಸಮೃದ್ಧಿಯಿಂದ ತುಂಬಿದೆ ಅನ್ನುವುದು ಹೊಸ ವರ್ಷಕ್ಕಾಗಿ ವರಕವಿಯ ಅರಿಕೆ, ಹಾರೈಕೆ ಅಥವಾ ಕವಿ ಮನಸಿನ ಆಶಯವೂ ಇರಬಹುದು. ಈಗ, ಇವತ್ತು ಹೊಸ ವರ್ಷಕ್ಕೆ ಅದರ ಬರವಿಗಾಗಿ ನಮ್ಮ ನಿರೀಕ್ಷೆಯೇನು? ಆಶಯವೇನು? ಹಾರೈಕೆಯೇನು?

ನಾವೆಲ್ಲಿಗೆ ಬಂದು ತಲುಪಿದ್ದೇವೆಂದರೆ ಮನುಷ್ಯ ಮನುಷ್ಯನನ್ನು ದ್ವೇಷಿಸುವವರೆಗೆ! ಹಿಂದೆ ಮುಂದೆ ನೋಡದೆ ಗುಂಡಿಟ್ಟು ಕೊಲ್ಲುವವರೆಗೆ! ಭೋಗಿಸಿ ಬೆಂಕಿ ಕೊಟ್ಟು ಜೀವ ಸಹಿತ ಸುಡುವವರೆಗೆ! ಯಾಕೆ?

ಯಾಕೆ ಹೀಗಾಗಿದೆ? ಜಾತಿಯ ಹೆಸರಿನಲ್ಲಿ, ಮತದ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ, ದೇವರ ಹೆಸರಿನಲ್ಲಿ, ದೇಶದ